

# ಇದು ‘ಸತ್ತವರ ಸಾಮ್ರಾಜ್ಯ’

ಒಂದೇ ಕಡೆ 60 ಲಕ್ಷ ಮಂದಿಯ ತಲೆಬುರುಡೆಗಳು, ಮೂಳೆಗಳು ಧುತ್ತನೆ ಎದುರಾದರೆ... ನಿಮ್ಮನ್ನು ಬೆಚ್ಚಿ ಬೀಳಿಸುವ ಇಂತಹದೊಂದು ದೃಶ್ಯ ಪ್ಯಾರಿಸ್‌ನ ಗುಹೆಗಳಲ್ಲಿ ಕಾಣಸಿಗುತ್ತದೆ. ಇದು ‘ಸತ್ತವರ ಸಾಮ್ರಾಜ್ಯ’. ‘ಸುರಂಗ ಸಮಾಧಿಗಳು’ ಎಂದೇ ಖ್ಯಾತಿ ಗಳಿಸಿರುವ ಈ ಅಸ್ಥಿಗಳ ಗುಹೆಗಳು 18ನೇ ಶತಮಾನದಲ್ಲೇ ನಿರ್ಮಾಣಗೊಂಡವು.

ಈ ಅಸ್ಥಿ ಗುಹೆಗಳು ಹೇಗೆ ಸೃಷ್ಟಿಯಾದವು ಎಂಬುದರ ಹಿಂದೆ ಸುದೀರ್ಘ ಇತಿಹಾಸವಿದೆ. ಪ್ಯಾರಿಸ್‌ನ ಮಧ್ಯ ಭಾಗದಲ್ಲಿದ್ದ ಸ್ಮಶಾನದಲ್ಲಿ ಸಮಾಧಿಗಳ ಸಂಖ್ಯೆ ಹೆಚ್ಚಾಗಿ ಮೃತಪಟ್ಟವರ ಹೊಸ ಸಮಾಧಿಗಳಿಗೆ ಜಾಗವೇ ಇಲ್ಲದಂತಾಯ್ತು. ಅದೇ ಸಂದರ್ಭದಲ್ಲಿ ಅಲ್ಲಿರುವ ಹಳೆಯ ಕಲ್ಲು ಗಣಿಗಳೂ ಕುಸಿಯಲಾರಂಭವಾದವು. ಆಗ ಅಲ್ಲಿಯ ಪೊಲೀಸ್ ಲೆಫ್ಟಿನೆಂಟ್ ಜನರಲ್ ಆಗಿದ್ದ ಅಲೆಕ್ಸಾಂಡರ್ ಎಂಬಾತನಿಗೆ ಎರಡೂ ಸಮಸ್ಯೆಗಳಿಗೆ ಒಂದೇ ಪರಿಹಾರ ಹೊಳೆಯಿತು. ಸಮಾಧಿಗಳನ್ನು ಅಗೆದು ಅಸ್ಥಿಗಳನ್ನು, ಸಮಾಧಿ ಕಲ್ಲುಗಳನ್ನು ಗಣಿ ಇದ್ದ ಜಾಗಕ್ಕೆ ವರ್ಗಾಯಿಸಲಾರಂಭಿಸಿದ. ಇದಕ್ಕಾಗಿ ಹಿಡಿದಿದ್ದು ಬರೋಬ್ಬರಿ ಎರಡು ವರ್ಷಗಳು (1786– 1788). ಹಾಗೆಯೇ ಸುಮಾರು 600 ವರ್ಷಗಳಿಂದ (ಕ್ರಿ.ಶ. 1130ರಿಂದ) ಸಮಾಧಿಗಳಿಂದ ತುಂಬಿ ತುಳುಕುತ್ತಿದ್ದ ಪ್ಯಾರಿಸ್‌ನ ಇತರ 3–4 ಸ್ಮಶಾನಗಳಿಂದಲೂ ಅಸ್ಥಿಗಳನ್ನು ಅಲ್ಲಿಗೇ ಸಾಗಿಸಲಾಯಿತು.

ಎಲ್ಲೆಂದರಲ್ಲಿ ಗುಡ್ಡೆ ಹಾಕಿದ್ದ ಈ ಮೂಳೆಗಳನ್ನು 19ನೇ ಶತಮಾನದ ಆರಂಭದಲ್ಲಿ ನೀಟಾಗಿ ಜೋಡಿಸಲಾಯಿತು. ಆಗ ಮೂಳೆಗಳ ಗೋಡೆಗಳು ನಿರ್ಮಾಣಗೊಂಡವು. ಅಂಗವೈಕಲ್ಯವಿದ್ದವರ ಅಸ್ಥಿಗಳನ್ನು ಬೇರೆ ಜೋಡಿಸಲಾಯಿತು. ಜೊತೆಗೆ ಗಣಿಯಲ್ಲಿ ದೊರಕಿದ ಖನಿಜಗಳನ್ನೂ ಪ್ರದರ್ಶನಕ್ಕೆ ಇಡಲಾಯಿತು. 1830ರಲ್ಲೇ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಯ್ತಾದರೂ ಹಲವಾರು ಕಾರಣಗಳಿಂದ ಮಧ್ಯೆ ಕೆಲವು ಬಾರಿ ಮುಚ್ಚಲಾಗಿತ್ತು. ಈ ಗುಹೆಗಳಲ್ಲಿ 19 ಮೀಟರ್‌ಗಳಷ್ಟು ಕೆಳಗೆ ಇಳಿದ ನಂತರ 1.5 ಕಿ.ಮೀ. ನಡೆದರೆ ಮೂಳೆಗಳನ್ನು ಕಲಾತ್ಮಕವಾಗಿ ಜೋಡಿಸಿದ ಕೊಠಡಿಗಳು ಕಾಣಸಿಗುತ್ತವೆ. ಕೆಲವನ್ನು ಹೃದಯದಾಕಾರದಲ್ಲಿ ಜೋಡಿಸಿದರೆ, ಕೆಲವು ಕಡೆ ಕಂಬವನ್ನೇ ಅಸ್ಥಿಗಳಿಂದ ಅಲಂಕರಿಸಲಾಗಿದೆ.

**ಎಸ್.ಹೆಗಡೆ**

